ಹರಿಹರ ತಾಲ್ಲೂಕಿನಲ್ಲಿ ಹರಿಜನರಿಗಾಗಿಯೇ ನಡೆಸುತ್ತಿರುವ ಪಾಠಶಾಲೆಗಳನ್ನು ಅದೇ ಗ್ರಾಮದಲ್ಲಿರುವ ಪಾಠಶಾಲೆಗೆ ಐಕ್ಯಗೊಳಿಸುವುದು.

೧೯೫. ಶ್ರೀ ಬಿ. ಜಿ. ಕೊಟ್ರಪ್ಪ (ಹರಿಹರ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹರಿಹರ ತಾಲ್ಲೂಕಿನಲ್ಲಿ ಕೆಲವು ಗ್ರಾಮಗಳಲ್ಲಿನ ಹರಿಜನ ಕೇರಿಯಲ್ಲಿರುವ ಪಾಠಶಾಲೆಯಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ?

ಆ) ಹರಿಜನ ಕೇರಿಯಲ್ಲಿ ಬೇರೆ ಪಾಠಶಾಲೆ ಪ್ರಾರಂಭಿಸಿರುವುದು ಭಿನ್ನತೆಯನ್ನು ತರಲು ಕಾರಣವಾಗಿದೆಯೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಇ) ಸದರಿ ಪಾಠಶಾಲೆಗಳನ್ನು ಉಳಿದ ಸರ್ಕಾರಿ ಪಾಠಶಾಲೆಗಳಲ್ಲಿ ಐಕ್ಯಗೊಳಿಸಿದಲ್ಲಿ ಸರ್ಕಾರಕ್ಕೆ ಉಳಿತಾಯವಾಗುವುದಿಲ್ಲವೇ ?

ಈ) ಸದರಿ ಶಾಲೆಗಳ ಉಪಾಧ್ಯಾಯರನ್ನು ಐಕ್ಯವಾಗುವ ಪ್ರಾಥಮಿಕ ಶಾಲೆಗಳಲ್ಲಿಯೇ ವರ್ಗಾವರಿಸಿದಲ್ಲಿ ವಿದ್ಯಾರ್ಥಿಗಳಿಗೆ ಅನುಕೂಲವಾಗುವುದಲ್ಲದೆ ಸರ್ಕಾರಕ್ಕೂ ಹೆಣದ ಉಳಿತಾಯವಾಗುವುದಿಲ್ಲವೇ ?

ಶ್ರೀ ಎಂ. ರಘುಪತಿ (ಶಿಕ್ಷಣ ಮಂತ್ರಿಗಳು).—

ಅ) ೧೫೨.

ಆ) ಇಲ್ಲ.

ಇ) ಹರಿಜನ ಕೇರಿಯಲ್ಲಿ ಶಾಲೆಯನ್ನು ತೆರೆದರೆ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಪಂಗಡ ಮಕ್ಕಳು ಬರುತ್ತಾರೆ. ಆದ್ದರಿಂದ ಸರ್ಕಾರ ಎಲ್ಲರಿಗೂ ಸೌಲಭ್ಯ ಒದಗಿಸಲು ಈ ವ್ಯವಸ್ಥೆ ಮಾಡುತ್ತಿದೆ. ಇಲ್ಲಿ ಉಳಿತಾಯದ ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಹರಿಹರದಲ್ಲಿರುವ ಸರ್ಕಾರಿ ಕಿರಿಯ ಕಾಲೇಜಿನಲ್ಲಿ ವಾಣಿಜ್ಯ ವಿಭಾಗವನ್ನು ಪ್ರಾರಂಭಿಸುವ ಬಗ್ಗೆ

೧೯೫೮. ಶ್ರೀ ಬಿ.ಜಿ. ಕೊಟ್ರಪ್ಪ (ಹರಿಹರ) ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹರಿಹರದಲ್ಲಿರುವ ಸರ್ಕಾರಿ ಕಿರಿಯ ಕಾಲೇಜಿನಲ್ಲಿ ಕೇವಲ ಕಲಾ ವಿಭಾಗವಿದ್ದು ಇತರೇ ವಿಷಯ ಇಲ್ಲದೆ ಇರುವುದರಿಂದ ಅಲ್ಲಿಯ ವಿದ್ಯಾರ್ಥಿಗಳಿಗೆ ತೊಂದರೆ ಆಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಆ) ವಾಣಿಜ್ಯ ವಿಭಾಗವನ್ನು ಸದರಿ ಕಾಲೇಜಿನಲ್ಲಿ ಪ್ರಾರಂಭಿಸಿದಲ್ಲಿ ಸರ್ಕಾರಕ್ಕೆ ಆಗುವ ತೊಂದರೆ ಏನು.

ಇ) ಸದರಿ ಕಾಲೇಜಿನಲ್ಲಿ ಇದ್ದ ಸಂಸ್ಕೃತ ವಿಭಾಗವನ್ನು ಮುಚ್ಚಿರುವುದರಿಂದಲೂ ಸದರೀ ಭಾಗಕ್ಕೆ ಇದ್ದ ಪ್ರಾಧ್ಯಾಪಕರ ಜಾಗ ಹಾಗೇ ಇರುವುದರಿಂದ ಕಿರಿಯ ಕಾಲೇಜಿನಲ್ಲಿ ಹೆಚ್ಚಿನ ಶ್ರಮ ವಂತ್ತು ಹಾನಿ ಇಲ್ಲದೆ ವಾಣಿಜ್ಯ ವಿಭಾಗವನ್ನು ಪ್ರಾರಂಭಿಸಬಹುದಲ್ಲವೇ;

ಈ) ೧೯೮೬–೮೭ನೇ ಸಾಲಿನಿಂದ ವಾಣಿಜ್ಯ ವಿಭಾಗವನ್ನು ಹರಿಹರದಲ್ಲಿರುವ ಸರ್ಕಾರಿ ಕಿರಿಯ ಕಾಲೇಜಿನಲ್ಲಿ ಪ್ರಾರಂಭಿಸಲು ಭರವಸೆಯನ್ನು ಸರ್ಕಾರದವರು ಕೊಡುವರೇ?

ಶ್ರೀ ಎಂ. ರಘುಪತಿ (ಶಿಕ್ಷಣ ಸಚಿವರು)—

ಅ) ಕಲಾವಿಭಾಗ ಮಾತ್ರ ನೀಡಲಾಗಿದೆ.